ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ (೧೯೮೩-೮೪ ರಿಂದ ೧೯೮೫-೮೬ರವರೆಗೆ) ರೂ. ೪೫೫.೭೮ ಲಕ್ಷ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

		೧೯೮೩-೮೪	೧೯೪-೮೫	೧೯೫-೮೬
		೧	೨	೩
			(ಲಕ್ಷ ರೂ.ಗಳಲ್ಲಿ)	
೧.	ಸರ್ಕಾರಿ ರೇಷ್ಮೆ ಕಾರ್ಖಾನೆ ಕೊಳ್ಳೇಗಾಲ	೫೧.೬೬	೬೧.೬೪	೫೪.೮೦
೨.	ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮಾರಹಳ್ಳಿ	೩೧.೧೯*	೩೩.೭೪	೨೭.೬೯
೩.	ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ	೩೯.೬೩*	೨೪.೫೯	೨೪.೩೮
೪.	ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ	೨೯.೬೪	೧೭.೩೭	೧೭.೮೯
೫.	ಸರ್ಕಾರಿ ನೇಯ್ಗೆ ಮತ್ತು ಹುರಿ ಮಾಡುವ ಕಾರ್ಖಾನೆ, ಮುಡಿಗುಂಡಂ	೧೨.೧೫	೧೪,೨೦	೧೫.೨೧
	ಒಟ್ಟು	೧೬೪.೭೭	೧೫೧.೫೪	೧೫೯.೭೭

* ಲೆಕ್ಕ ಪತ್ರಗಳ ಪರಿಶೋಧನೆಯ ನಂತರದ ವಿವರಗಳು.

ಈ) ನಷ್ಟವನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳು.

೧) ಪ್ರತಿ ಬೇಸಿನಿನ ಉತ್ಪಾದನೆಯನ್ನು ಅಧಿಕಗೊಳಿಸುವಂತೆ ಕಾರ್ಮಿಕರ ಸಂಧಾನದಲ್ಲಿ ಒಪ್ಪಂದ ಮ್ನಾಡಿಕೊಂಡಿರುವುದು.

೨) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಹಳೆಯ ಮತ್ತು ಫಲಕಾರಿಯಲ್ಲದ ಯಂತ್ರೋಪಕರಣಗಳ ಬದಲಿಕೆ ಹಾಗೂ ನವೀಕರಣ ಮಾಡಲು ಉದ್ದೇಶಿಸಿರುವುದು.

೩) ವಯಸ್ಸಾದ ಹಾಗೂ ಅದಕ್ಷ ಕಾರ್ಮಿಕರನ್ನು ಸ್ವಯಂ ಪ್ರೇರಣೆಯಿಂದ ನಿವೃತ್ತಿ ಗೊಳಿಸಲು ಮತ್ತು ಈ ಕಾರ್ಮಿಕರ ಬದಲು ದಕ್ಷ ಕಾರ್ಮಿಕರನ್ನು ನೇಮಿಸಲು ಕಾರ್ಮಿಕರ ಸಂಘಾನದಲ್ಲಿ ಅನುವು ಮಾಡಿಕೊಂಡಿರುವುದು.

೪) ಉತ್ಪತ್ತಿ ಉತ್ತೇಜನಪನ್ನು ನೀಡುವುದು.

೫) ರೇಷ್ಮೆ ಗುಣಮಟ್ಟವನ್ನು ಉತ್ತಮಪಡಿಸುತ್ತಿರುವುದು.

ರಾಜ್ಯ ಸರ್ಕಾರದ ಕೈಮಗ್ಗ ಉದ್ದಿಮೆಗೆ ನಬಾರ್ಡ್ ಸಹಾಯಧನ

೧೦೩ (೧೨೩) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕೈಮಗ್ಗದ ನೇಕಾರ ಸಹಕಾರಿ ಸಂಘಗಳಿಗೆ ನಬಾರ್ಡ್ ಸಂಸ್ಥೆಯಿಂದ ೧೯೮೪, ೧೯೮೫, ೧೯೮೬, ೧೯೮೭ನೇ ಸಾಲುಗಳಲ್ಲಿ ಮಂಜೂರಾದ ವಿವಿಧ ಧನಸಹಾಯವೆಷ್ಟು?

ಆ) ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳು ತಮ್ಮ ರಾಜ್ಯ ಪಡೆದಿರುವ ಸಹಾಯಧನಕ್ಕಿಂತ ಸುಮಾರು ೩೦ ಪಟ್ಟು ಹೆಚ್ಚಿನ ಧನಸಹಾಯ ಪಡೆದಿರುವ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಅತಿ ಕನಿಷ್ಠ ಸಹಾಯಧನ ಪಡೆದು ರಾಜ್ಯದಲ್ಲಿಯ ಕೈಗಾರಿಕೋದ್ಯಮವು ಅಭಿವೃದ್ಧಿ ಹೊಂದದಿರಲು ಕಾರಣರಾರು ?

ಈ) ಈ ದಿಶೆಯಲ್ಲಿ ಕೈಗಾರಿಕೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳು ಏನು ?

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೯೮೪ ರಿಂದ ೧೯೮೭ ರವರೆಗೆ ಕೈಮಗ್ಗದ ನೇಕಾರ ಸಹಕಾರ ಸಂಘಗಳು ನಬಾರ್ಡ್ ಸಂಸ್ಥೆಯಿಂದ ಪಡೆದಿರುವ ದಾಡಿಯುವ ಬಂಡವಾಳದ ಸಾಲಗಳ ವಿವರ ಈ ರೀತಿ ಇದೆ.

(ಲಕ್ಷ ರೂ.ಗಳಲ್ಲಿ)

೧೯೮೩-೮೪ ರಲ್ಲಿ ೫೪ ಸಂಘಗಳು ರೂ. ೨೨೦-೮೦
೧೯೮೪-೮೫ ರಲ್ಲಿ ೨೬ ಸಂಘಗಳು ರೂ. ೧೩೭-೮೦
೧೯೮೫-೮೬ ರಲ್ಲಿ ೩೮ ಸಂಘಗಳು ರೂ. ೨೩೦-೪೫
೧೯೮೬-೮೭ ರಲ್ಲಿ ೨೫ ಸಂಘಗಳು ರೂ. ೧೫೩-೪೬

ಆ) ಬಂದಿದೆ.

ಇ) ಸಂಬಂಧಪಟ್ಟ ಸಹಕಾರ ಸಂಘಗಳ ಆದಳಿತ ವರ್ಗಗಳು-

೧) ಸಹಕಾರ ಸಂಘಗಳ ಪುನರ್ ಸಂಘಟನೆ ಮತ್ತು ಪುನಶ್ಚೇತನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

೨) ಸಾಲ ಪಡೆಯುವ ಮಿತಿಯನ್ನು ಹೆಚ್ಚಿಸಲು ಷೇರು ಬಂಡವಾಳವನ್ನು ಒದಗಿಸುವುದು.

೩) ನಬಾರ್ಡ್‌ನಿಂದ ಬೇಕಾದ ವಿವಿಧ ಸಹಾಯವನ್ನು ಕೇಂದ್ರ ಸಹಕಾರ ಬ್ಯಾಂಕುಗಳಿಂದ ಒದಗಿಸಲು ಏರ್ಪಡಿಸುವುದು.

ತುಂಗಭದ್ರಾ ಫೈಬರ್ಸ್ ಲಿಮಿಟೆಡ್ ಕೈಗಾರಿಕೆಯ ಬಗ್ಗೆ

೧೦೪ (೩೫೮) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಯಚೂರು ಜಿಲ್ಲೆಯ ತುಂಗಭದ್ರಾ ಫೈಬರ್ಸ್ ಕೈಗಾರಿಕೆಯು ಎಷ್ಟು ದಿನಗಳಿಂದ ಉತ್ಪಾದನೆಯನ್ನು ನಿಲ್ಲಿಸಿದೆ ಹಾಗೂ ಕಾರಣಗಳೇನು ?

ಆ) ಉತ್ಪಾದನೆಯನ್ನು ಪ್ರಾರಂಭಿಸುವ ಸಲುವಾಗಿ ಸರ್ಕಾರದಿಂದ ಏನಾದರೂ ಪ್ರಯತ್ನ ನಡೆದಿದೆಯೇ ?

ಇ) ಹಾಗಿದ್ದಲ್ಲಿ, ಯಾವಾಗಿನಿಂದ ಆ ಕೈಗಾರಿಕೆಯು ಉತ್ಪಾದನೆಯನ್ನು ಪ್ರಾರಂಭಿಸುವುದು?

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಜನವರಿ ೧೯೮೫ ರಿಂದ ವಿದ್ಯುತ್ ಅಭಾವ, ಹಣಕಾಸಿನ ಅಡಚಣೆ ಇವುಗಳಿಂದಾದ ನಷ್ಟಗಳು ಇವು ಮುಚ್ಚುವುದಕ್ಕೆ ಕಾರಣಗಳಾಗಿವೆ.

ಆ) ಹೌದು. ಹಣಕಾಸು ಸಂಸ್ಥೆಗಳೊಡನೆ ಈ ಬಗ್ಗೆ ಚರ್ಚಿಸಲಾಗುತ್ತಿದೆ.

ಇ) ಕಾರ್ಖಾನೆಯನ್ನು ಸಾಧ್ಯವಾದಷ್ಟು ಬೇಗ ತೆರೆಯಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯುದ್ದೀಕರಣ ಆಗದೇ ಇರುವ ಗ್ರಾಮಗಳು

೧೦೬ (೧೦೮) ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಮಾನ್ಯ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ವಿದ್ಯುದ್ದೀಕರಣವಾಗದೇ ಇರುವ ಒಟ್ಟು ಹಳ್ಳಿಗಳ ಸಂಖ್ಯೆ ಎಷ್ಟು ?

ಆ) ಸರ್ಕಾರವು ಇವುಗಳನ್ನು ವಿದ್ಯುದ್ದೀಕರಣಗೊಳಿಸಲು ಕೈಗೊಂಡ ಕ್ರಮಗಳೇನು ?